ಸರ್ಕಾರಕ್ಕೂ ಇಲ್ಲ, ಕೇಂದ್ರ ಸರ್ಕಾರಕ್ಕೂ ಕೂಡ ಕಮಿಟಿಯನ್ನು ನೇಮಕ ಮಾಡುವುದಕ್ಕೆ ಅಧಿಕಾರ ಇಲ್ಲ. ಈ ರೀತಿ ಇರುವಾಗ ತಾವು ಕಮಿಟಿಯನ್ನು ನೇಮಕ ಮಾಡಿದ್ದೀರಿ. ನೀವು ಈಗ ರಾಜ್ಯಾಂಗಕ್ಕೆ ವಿರುದ್ಧವಾಗಿ ನಡೆದುಕೊಳ್ಳುತ್ತಿದ್ದೀರಿ. ತಾವು ಮಂತ್ರಿಗಳಾಗಿ ಪ್ರಮಾಣವಚನ ಸ್ವೀಕಾರ ಮಾಡುವಾಗ ರಾಜ್ಯಾಂಗಕ್ಕೆ ಲಾಯಲ್ ಆಗಿರುತ್ತೇನೆಂದು ಹೇಳಿ ಈಗ ರಾಜ್ಯಾಂಗಕ್ಕೆ ವಿರುದ್ಧವಾಗಿ ಹೋಗುತ್ತಿದ್ದೀರಿ ಇದು ಸರಿಯೇ ?

ಶ್ರೀ ಹೆಚ್. ಡಿ. ದೇವೇಗೌಡ.—ಈಗ ಇದರಲ್ಲಿ ಎರಡು ಭಾಗ ಅಡಕವಾಗಿದೆ. ೧೯೬೧, ೧೯೭೧ ಮತ್ತು ೧೯೮೧ನೇ ಸಾಲಿನಲ್ಲಿ ಆದಂಥ ಸೆನ್ಸಸ್‌ನಿಂದ ಹೆಚ್ಚು ವೇರಿಯೇಷನ್ ಆಗಿದೆ ಎನ್ನುವುದೇ ತಮ್ಮ ಮೂಲಭೂತವಾದ ಪ್ರಶ್ನೆ. ಶ್ರೀಮಾನ್ ದೇವರಾಜ ಅರಸುರವರು ಮುಖ್ಯಮಂತ್ರಿಗಳಾಗಿದ್ದಂಥ ಕಾಲದಲ್ಲಿ ಈ ಬಗ್ಗೆ ಕೆಲವು ತೊಡಕುಗಳು ಬಂದವು. ಆದರೆ ಸೆನ್ಸಸ್ ಮಾಡತಕ್ಕಂಥ ಅಧಿಕಾರಿಗಳು, ಮತ್ತು ಅದರ ಹೊಣೆ ಹೊತ್ತುಕೊಳ್ಳುವವರು ಕೇಂದ್ರ ಸರ್ಕಾರದವರು. ಆ ಕೆಲಸ ರಾಜ್ಯ ಸರ್ಕಾರದ್ದು ಅಲ್ಲ ಆದರೆ ನಮ್ಮ ರಾಜ್ಯ ಸರ್ಕಾರದ ಅಧಿಕಾರಿಗಳು ಈ ಕೆಲಸಕ್ಕೆ ನೆರವಾಗುತ್ತಾರೆ ಅಷ್ಟೇ. ಅಧಿಕಾರಿಗಳು ಸೆನ್ಸಸ್ ಮಾಡುವಂತಹ ಕಾಲದಲ್ಲಿ ಕೆಲವು ವರ್ಗದ ಜನರು ಈ ಟ್ರೈಬಲ್ಸ್‌ನವರಿಗೆ ಇರತಕ್ಕಂಥ ಸೌಲಭ್ಯಗಳನ್ನು ಪಡೆದುಕೊಳ್ಳಲು ಈ ಒಂದು ಸಂದರ್ಭವನ್ನು ದುರುಪಯೋಗ ಮಾಡಿಕೊಂಡು ಸೇರಿಕೊಂಡಿರತಕ್ಕಂಥ ಕೆಲಸ ಕೂಡ ನಡೆದಿದೆ. ಆದರೆ ಈ ವಿಚಾರ ಕೇಂದ್ರ ಸರ್ಕಾರದ ಗಮನಕ್ಕೆ ಬಂದಿಲ್ಲ. ಅವರು ಸಹ ಈ ಬಗ್ಗೆ ಈಗ ಯೋಚನೆ ಮಾಡುತ್ತಿದ್ದಾರೆ. ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಈ ಜನಸಂಖ್ಯೆ ಯಾವ ರೀತಿಯಲ್ಲಿ ಬೆಳೆಯಿತು ? ಇದಕ್ಕೆ ಕಾರಣವೇನು ? ಎನ್ನುವುದನ್ನು ಯೋಚನೆ ಮಾಡಿ ಒಂದು ಪರಿಹಾರವನ್ನು ಕಂಡುಹಿಡಿಯುವುದಕ್ಕೆ ಪ್ರಯತ್ನ ಮಾಡುವ ಹಂತದಲ್ಲಿ ಇದ್ದಾರೆ. ಅವರಿಗೂ ಸಹ ಈ ಸೆನ್ಸಸ್ ಫಿಗರ್ಸ್ ನೋಡಿ ಸಂಶಯ ಬಂದಿದೆ. ಆದ್ದರಿಂದ ಪುನರ್‌ಪರಿಶೀಲನೆ ಮಾಡುವ ಹಂತದಲ್ಲಿ ಇದ್ದಾರೆ. ಎರಡನೇಯದಾಗಿ ಈಗ ಕೆಲವು ಜಾತಿಗಳು ಈ ಟ್ರೈಬಲ್ಸ್‌ನಲ್ಲಿ ಸೇರಿಸಬೇಕೆಂದು ರಾಜ್ಯ ಸರ್ಕಾರ ಈ ಹಿಂದೆಯೇ ತಮ್ಮ ಶಿಫಾರಸ್ಸುಗಳನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿದ್ದಾರೆ. ಈ ಬಗ್ಗೆ ಕೇಂದ್ರ ಸರ್ಕಾರದವರು ಕೆಲವು ತಕರಾರುಗಳನ್ನು ಎತ್ತಿ ಅದಕ್ಕೆ ಉತ್ತರವನ್ನು ರಾಜ್ಯ ಸರ್ಕಾರದಿಂದ ಕೇಳಿತ್ತು. ಅದಕ್ಕೆ ರಾಜ್ಯ ಸರ್ಕಾರ ಉತ್ತರವನ್ನು ಸಹ ಕೊಟ್ಟಿದೆ. ಇದರಲ್ಲಿ ಸುಮಾರು ೩ ಉಪ ಜಾತಿಗಳನ್ನು ಸೇರಿಸಬೇಕೆಂದು ರಾಜ್ಯ ಸರ್ಕಾರ ಶಿಫಾರಸ್ಸು ಮಾಡಿದೆ. ನಮ್ಮ ಶಿಫಾರಸ್ಸು ಅನ್ನು ಪಾರ್ಲಿಮೆಂಟ್‌ನಲ್ಲಿ ಇಟ್ಟು ಚರ್ಚೆ ಮಾಡಬೇಕಾಗುತ್ತದೆಂದು ಕೆಲವು ಜನರು ಹೇಳುತ್ತಾರೆ. ಮತ್ತೆ ಕೆಲವರು ಪಾರ್ಲಿಮೆಂಟ್‌ನಲ್ಲಿ ಚರ್ಚೆಯಾಗಬೇಕಾಗಿಲ್ಲ ವೆಂದು ಹೇಳುತ್ತಾರೆ. ಅದು ಏನೇ ಆದರೂ ಸಹ ಅಂತಿಮವಾಗಿ ಕೇಂದ್ರ ಸರ್ಕಾರ ಮಾನ್ಯತೆ ಮಾಡಿ ಒಂದು ನಿರ್ಣಯವನ್ನು ಕೊಡುವ ತನಕ ನಮ್ಮ ಶಿಫಾರಸ್ಸುಗಳು ಮಾನ್ಯತೆ ಪಡೆಯುವುದಕ್ಕೆ ಸಾಧ್ಯವಿಲ್ಲ.

ಹುಕ್ಕರಿ ತಾಲ್ಲೂಕಿನ ಕೆರೆಗಳು

೩೭೧. ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ).—ಮಾನ್ಯ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ,—

ಅ) ಹುಕ್ಕೇರಿ ತಾಲ್ಲೂಕಿನಲ್ಲಿ ೧೯೮೧ರ ನಂತರ ಎಷ್ಟು ಕೆರೆಗಳು ಕಾರ್ಯವು ಪ್ರಾರಂಭವಾಗಿರುತ್ತದೆ. ಮಂಜೂರಾದ ದಿನಾಂಕ, ಪ್ರಾರಂಭವಾದ ದಿನಾಂಕ ಹಾಗೂ ಸ್ಥಳಗಳ ಹೆಸರುಗಳನ್ನು ನಮೂದಿಸುವುದು.

ಆ) ಹರಿಗಾಪುರ ಕೆರೆ, ರಾಶಿಂಗ್ ಕೆರೆ ಮಂಜೂರಾಗಿದ್ದುದು ನಿಜವೇ?

ಇ) ಬೋರಗಲ್ಲ ಕೆರೆಯ ಕೆಲಸವನ್ನು ಪ್ರಾರಂಭಿಸುವುದಕ್ಕಾಗಿ ತಡವಾಗುತ್ತಿರುವುದಕ್ಕೆ ಕಾರಣವೇನು?

ಈ) ಅಂಕಲೆ, ಬಾಡವಾಡಿ, ಮಸರಗುಪ್ಪಿ ಕೆರೆಗಳ ಕೆಲಸವು ಪ್ರಾರಂಭವಾದದ್ದು ಯಾವಾಗ?

ಉ) ಕೋಚರಿ ಹಾಗೂ ಸಲಾಮವಾಡಿ ಯಾತ ನೀರಾವರಿ ಕೆಲಸವು ಪ್ರಾರಂಭವಾದದ್ದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಊ) ಕೆರೆಗಳ ನಿರ್ಮಾಣದಲ್ಲಿ ಭೂ ಸ್ವಾಧೀನತೆ ಮಾಡಿಕೊಳ್ಳಲು ವಿಶೇಷ ಕಾನೂನನ್ನು ರಚಿಸುವುದು ಸರ್ಕಾರದವರ ಯೋಚನೆಯಲ್ಲಿದೆಯೇ ?

ಶ್ರೀ ಹೆಚ್ ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಹುಕ್ಕೇರಿ ತಾಲ್ಲೂಕಿನಲ್ಲಿ ೧೯೭೧ರ ನಂತರ ನಾಲ್ಕು (೪) ಕೆರೆಗಳು ಪ್ರಾರಂಭವಾಗಿವೆ ಅವುಗಳೆಂದರೆ.—

ಕ್ರಮ ಸಂಖ್ಯೆ	ಕೆರೆಯ ಹೆಸರು, ಸ್ಥಳ	ಮಂಜೂರಾದ ದಿನಾಂಕ	ಪ್ರಾರಂಭವಾದ ದಿನಾಂಕ
೧	೨	೩	೪
೧)	ಭೈರಾಪುರದ ಹತ್ತಿರದ ಕೆರೆ	೧೦–೨–೧೯೭೩	೪–೧೨–೧೯೭೪
೨)	ಹರಗಾಪುರದ ಹತ್ತಿರದ ಕೆರೆ	೨೫–೫–೧೯೭೪	೧–೨–೧೯೭೫
೩)	ಬೆಲ್ವಿ ಹತ್ತಿರದ ಕೆರೆ	೧೫–೬–೧೯೭೪	೧೧–೯–೧೯೭೫
೪)	ಅವ್ವಣಗಿ ಹತ್ತಿರ ಇಂಗುವ ಕೆರೆ	೧೬–೩–೧೯೭೩	೧೨–೧೧–೧೯೭೩

ಆ) ೧) ಹರಗಾಪುರ ಕೆರೆ ಮಂಜೂರಾಗಿದೆ.

೨) ರಾಶಿಂಗ್ ಕೆರೆ ಮಂಜೂರಾಗಿಲ್ಲ.

ಇ) ಬೋರ್‌ಗಲ್ ಕೆರೆಯು ಯಾವುದೇ ಅಂಗೀಕೃತ ಕಾರ್ಯಕ್ರಮದಲ್ಲಾಗಲೀ ಅಥವಾ ಇದುವರೆಗಿನ ಆಯವ್ಯಯದ ಪಟ್ಟಿಯಲ್ಲಿ ಸೇರಿಲ್ಲವಾದ್ದರಿಂದ ಯೋಜನೆಯ ಅನ್ವೇಷಣೆ ಮಾಡಿಲ್ಲ. ಆದುದರಿಂದ ಕೆಲಸ ಪ್ರಾರಂಭ ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ಮಸರಿಗುಪ್ಪಿ ಮತ್ತು ಬಡವಾಡಿ ಕೆರೆಗಳ ನಿರ್ಮಾಣ ಕಾರ್ಯವನ್ನು ಜಿಲ್ಲಾ ಮಟ್ಟದ ಬರ ಪರಿಹಾರ ಕಾಮಗಾರಿ ಕಾರ್ಯಕ್ರಮದಲ್ಲಿ ಡಿಸೆಂಬರ್ ೧೯೭೫ರಲ್ಲಿ ತೆಗೆದುಕೊಳ್ಳಲಾಗಿದೆ. ಅಂಕಲಿ ಕೆರೆ ಕೆಲಸವು ಪ್ರಾರಂಭವಾಗಿಲ್ಲ.

ಉ) ೧) ಕೋಚಾರಿ ಏತ ನೀರಾವರಿ ಯೋಜನೆಯು ೧೯೭೫–೭೬ರ ಸಾಲಿನ ಆಯವ್ಯಯ ಪಟ್ಟಿಯಲ್ಲಿ ಸೇರಿಲ್ಲವಾದ್ದರಿಂದ ಕೆಲಸವನ್ನು ಪ್ರಾರಂಭ ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ.

೨) ಸಲಾಮವಾಡಿ ಯಾತ ನೀರಾವರಿ ಯೋಜನೆಯನ್ನು ಸಹಕಾರಿ ಸಂಘದ ಅಡಿಯಲ್ಲಿ ತೆಗೆದುಕೊಳ್ಳಲಾಗಿದೆ.

ಊ) ಇಲ್ಲ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಮಾನ್ಯ ಅಧ್ಯಕ್ಷರೇ, ಹುಕ್ಕೇರಿ ತಾಲ್ಲೂಕಿನ ಹರಗಾಪುರದ ಕೆರೆ ಮಂಜೂರಾಗಿದೆ ಎಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಅಲ್ಲಿ ಕೆಲಸ ಎಷ್ಟಾಗಿದೆ? ಅದರ ಸಲುವಾಗಿ ಎಷ್ಟು ಹಣ ಖರ್ಚು ಮಾಡಿದ್ದೀರಿ? ಅದನ್ನು ಮುಗಿಸಲು ಏನು ತೊಂದರೆ ಇದೆ ಎಂಬುದನ್ನು ಹೇಳಬೇಕು. ರಾಶಿಂಗ್ ಕೆರೆ ಕಳೆದಬಾರಿಯ ಆಯವ್ಯಯದಲ್ಲಿ ಬಂದಿದೆ. ಆದರೆ ಅದರ ನೀಲಿನಕ್ಷೆ ತಯಾರಾಗಿ, ಮಂಜೂರಾಗಿ ಕೆಲಸ ಪ್ರಾರಂಭ ಮಾಡುವುದಕ್ಕೆ ಯಾವಾಗ ಕಾರ್ಯಾಚರಣೆ ಮಾಡುತ್ತೀರಿ ಎಂದು ಕೇಳುತ್ತೇನೆ, ಬೋರಗಲ್ ಕೆರೆಯನ್ನು ಯಾವುದೇ ಯೋಜನೆಯಲ್ಲಿ ಅಳವಡಿಸಿಲ್ಲ ಎಂದು ಮಾನ್ಯ ಸಚಿವರು ಹೇಳಿದ್ದಾರೆ. ನಮ್ಮ ಕರ್ನಾಟಕ ರಾಜ್ಯದಲ್ಲಿ ನಾವು ಇವತ್ತು ದಿನನಿತ್ಯ ನೋಡುತ್ತಿದ್ದೇವೆ, ಇಲ್ಲಿ ನಾಲ್ಕು ದಿವಸದಿಂದ ಬರಗಾಲದ ಬಗ್ಗೆ ಆಲೋಚನೆ ಮಾಡುತ್ತಿದ್ದೇವೆ. ನಮ್ಮ ಭಾಗ ಸಹ ಬರಗಾಲ ಪ್ರದೇಶವಾಗಿದೆ. ಈ ಎಲ್ಲಾ ಕೆಲಸಗಳನ್ನು ಪ್ರಾರಂಭ ಮಾಡುವುದಕ್ಕೆ ಯಾವಾಗ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ?

ಶ್ರೀ ಹೆಚ್. ಡಿ. ದೇವೇಗೌಡ.—ಕೆಲಸಗಳನ್ನು ಮಾಡತಕ್ಕದ್ದರ ಬಗ್ಗೆ ಸರಕಾರಕ್ಕೆ ಆಶೆ ಇದೆ. ತೀವ್ರವಾದ ಆಶೋತ್ತರವನ್ನು ಇಟ್ಟುಕೊಂಡಿದ್ದೇವೆ. ಇದಕ್ಕೆ ಸ್ವಲ್ಪ ಹಣದ ಕೊರತೆ ಇದೆ ಎಂಬುದನ್ನು, ಸನ್ಮಾನ್ಯ ಸದಸ್ಯರು ತಿಳಿದುಕೊಂಡೂ, ಈ ಪ್ರಶ್ನೆ ಕೇಳುತ್ತಿದ್ದಾರೆ. ರಾಶಿಂಗ್ ಕೆರೆ ಹತ್ತಿರ ಇನ್‌ವೆಸ್ಟಿಗೇಟ್ ಮಾಡುವುದಕ್ಕೇ ಬಿಡುತ್ತಿಲ್ಲ. ಅಲ್ಲಿಗೆ ಪೋಲೀಸರನ್ನು ಕರೆದುಕೊಂಡು ಹೋಗಬೇಕಾಗಿ ಬಂದಿದೆ. ಈ ಕೆರೆಯ ಸಲುವಾಗಿ ೫೦ ಸಾವಿರ ರೂಪಾಯಿಗಳ ಬಜೆಟ್ ಪ್ರಾವಿಜನ್ ಇಟ್ಟಿದ್ದೇವೆ. ಅಲ್ಲಿ ಏನಾದರೂ ಗಲಾಟೆ ಆಗಿ ಫೈರಿಂಗ್ ಆದೀತು ಎಂಬ ಹೆದರಿಕೆ ಇದೆ, ತಾವು ಮತ್ತೇನಾದರೂ ಇಲ್ಲಿ ನಿಲುವಳಿ ಸೂಚನೆಯನ್ನು ತೆಗೆದುಕೊಂಡು ಬಂದು, ಅಸೆಂಬ್ಲಿಯಲ್ಲಿ ಸರಕಾರಕ್ಕೆ ಛೀಮಾರಿ ಹಾಕುತ್ತೀರಿ ಎಂದು, ಸ್ವಲ್ಪ ಹುಶಾರಾಗಿ ಹೋಗಿ ಎಂದು ಅಧಿಕಾರಿಗೆ ಹೇಳಿದ್ದೇನೆ. ಮತ್ತೇನೂ ಇಲ್ಲ, ಉಳಿದಂತೆ ಕೆರೆಗಳ ಕೆಲಸ ವಿವಿಧ ಹಂತಗಳಲ್ಲಿ ಆಗುತ್ತಿದೆ, ಹೆಚ್ಚು ಹಣ ಒದಗಿಸಿ ಮುಗಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದೇನೆ, ಕೊಚರಿ ಲಿಫ್ಟ್ ಇರಿಗೇಷನ್ ಸ್ಕೀಮ್ ಬಗ್ಗೆ ಈ ವರ್ಷ ಏನಾದರೂ ಆಶಾದಾಯಕವಾದ ಸನ್ನಿವೇಶ ಕಂಡು ಬಂದರೆ ಪ್ರಯತ್ನ ಮಾಡುತ್ತೇನೆ. ಈ ವರ್ಷದ ಬಜೆಟ್‌ನಲ್ಲಿ ಹಾಕುವುದಕ್ಕೆ, ಆದೂ ಆಶಾದಾಯಕವಾದ ಸನ್ನಿವೇಶ ಕಂಡು ಬಂದಲ್ಲಿ ಪ್ರಯತ್ನ ಮಾಡುತ್ತೇನೆ. ಅದಿಲ್ಲದೇ ಇದ್ದರೆ ಇಲ್ಲ. ಇನ್ನು ಸಲಾವರ್‌ವಾಡಿ ಏತ ನೀರಾವರಿ ಯೋಜನೆಯನ್ನು ಸರಕಾರವೇ ವಹಿಸಿಕೊಂಡು ಮಾಡಿ ಎಂದು ಇನ್ನೊಂದು ಪ್ರಶ್ನೆ ಕೇಳಿದ್ದಾರೆ. ಅದರ ಬಗ್ಗೆ ಪೂರ್ಣ ಮಾಹಿತಿ ತರಿಸಿದ್ದೇನೆ. ಇದರ ಬಗ್ಗೆ ಸರಕಾರ ಒಂದು ನಿರ್ಣಯಕ್ಕೆ ಬರುತ್ತದೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಮಾನ್ಯ ಅಧ್ಯಕ್ಷರೇ, ಒಂದು ವಿಷಯವನ್ನು ತಮ್ಮ ಮುಖಾಂತರ ಮಾನ್ಯ ಮಂತ್ರಿಗಳಿಗೆ ಕೇಳುವುದಕ್ಕೆ ಇಚ್ಛೆಪಡುತ್ತೇವೆ. ಬಹಳ ವಿಚಿತ್ರವಾದ ಪರಿಸ್ಥಿತಿಯಲ್ಲಿ ನಮ್ಮ ಕ್ಷೇತ್ರ ಇದೆ. ಇದು ತಮಗೂ ಗೊತ್ತಿದೆ. ಇದೇನೂ ತಮಗೆ ಹೊಸದಾದ ಕ್ಷೇತ್ರವಲ್ಲ. ಬೋರಗಲ್ ಕೆರೆಯ ಬಗ್ಗೆ ಸುಮಾರು ಮೂವತ್ತು ವರ್ಷದಿಂದ ಹೋರಾಟ ನಡೆದಿದೆ. ಈ ವರ್ಷ ಆಯವ್ಯಯದಲ್ಲಿ ಇದನ್ನು ಅಳವಡಿಸಿ, ಕೆರೆಯನ್ನು ಮಂಜೂರಾತಿ ಮಾಡುವುದರ ಬಗ್ಗೆ ತಾವು ಈ ಸದನದಲ್ಲಿ ಆಶ್ವಾಸನೆಯನ್ನು ಕೊಡಬೇಕೆಂದು ತಮ್ಮ ಮುಖಾಂತರ ಅವರನ್ನು ಕೇಳುತ್ತೇವೆ.

ಶ್ರೀ ಹೆಚ್. ಡಿ. ದೇವೇಗೌಡ.—ಸ್ವಾಮಿ, ನಾನು ಹೇಳಿದ್ದೇನೆ. ನಿಮ್ಮ ಕ್ಷೇತ್ರದ ಬಗ್ಗೆ ಸಹಾಯ ಮಾಡಬೇಕೆಂದು ಮನಸ್ಸಿದೆ. ಆದರೆ ಕೆಲವು ಕನ್‌ಸ್ಟ್ರೈಂಟ್ಸ್ ಇದೆ. ನನ್ನ ಶಕ್ತಿಯ ವ್ಯಾಪ್ತಿಯೊಳಗೆ ಪ್ರಯತ್ನ ಮಾಡುತ್ತೇನೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಬೋರಗಲ್ ಕೆರೆಯ ಬಗ್ಗೆ ಮಾತ್ರ ನಾನು ಕೇಳುತ್ತೇನೆ. ಉಳಿದುದರ ಬಗ್ಗೆ ನಾನು ಕೇಳುತ್ತಿಲ್ಲ. ಅಲ್ಲಿ ನಾವು ಬಹಳ ವಿಶಿಷ್ಟ ಪರಿಸ್ಥಿತಿಯಲ್ಲಿದ್ದೇವೆ. ಅಲ್ಲಿನ ಸರ್ವ ಜನರ ಪರವಾಗಿ ನಾನು ಕೇಳುತ್ತೇನೆ, ಈ ವರ್ಷದ ಆಯವ್ಯಯದಲ್ಲಿ ಅದನ್ನು ಸೇರಿಸುತ್ತೇವೆಂದು ತಾವು ಹೇಳಿದರೆ, ಅಲ್ಲಿಯ ಜನ ಅದನ್ನು ಇವತ್ತು ರೇಡಿಯೋದಲ್ಲಿ ಸಂತೋಷದಿಂದ ಕೇಳುತ್ತಾರೆಂದು ಹೇಳುತ್ತೇನೆ.

ಉಪಾಧ್ಯಕ್ಷರು.—ಅವರು ಹೇಳಿರುವ ಉತ್ತರ ಬೋರಗಲ್ ಕೆರೆಗೂ ಅನ್ವಯವಾಗುತ್ತದೆ.

ಶ್ರೀ ಹೆಚ್. ಡಿ. ದೇವೇಗೌಡ.—ಅವರ ತೀವ್ರತೆಯನ್ನು ನಾನು ಅರ್ಥ ಮಾಡಿಕೊಂಡಿದ್ದೇನೆ. ಸರಕಾರ ಪರಿಶೀಲನೆ ಮಾಡುತ್ತದೆ.

ಚಿಕ್ಕಮಗಳೂರು ತಾಲ್ಲೂಕಿನಲ್ಲಿ ಆನೆಗಳ ಹಾವಳಿ.

೩೩೯. ಶ್ರೀ ಐ. ಬಿ. ಶಂಕರ್ (ಚಿಕ್ಕಮಗಳೂರು).—ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ?

ಅ) ಚಿಕ್ಕಮಗಳೂರು ತಾಲ್ಲೂಕಿನಲ್ಲಿ ಆನೆಗಳ ಹಾವಳಿ ಇರುವುದು ಸರಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಆನೆಗಳ ಹಾವಳಿಯನ್ನು ತಪ್ಪಿಸಲು ಯಾವ ಕ್ರಮ ಕೈಕೊಳ್ಳಲಾಗಿದೆ?